

# ಚಂದಿರ, ಹುಣ್ಣಿಮೆ, ಬೆಳದಿಂಗಳು...

ಚುಮುಚುಮು ಚಳಿಗೀಗ
ಬೆಚ್ಚಗಾಗುವ ನಶೆಯೇರಿಸಿ
ಇಂಚಿಂಚೇ ಆವರಿಸುತ್ತಿರುವ ಸಂಜೆಗತ್ತಲು...
ಕಪ್ಪು ಕೊಳದ ಸ್ತಬ್ಧ ನೀರೊಳಗೂ
ವೀಣೆಯಾಡಿ ಕಣ್ಣ ಬೇಟೆಗೆ ನಿಂತ ನಕ್ಷತ್ರ ಸಾಲು...

ಹಾಲ್ತೊರೆಯ ಸವಿತೇರು
ಸವಾರಿ ಹೊರಟಂತೆ ಇತ್ತಿತ್ತಲೇ...
ರಸ್ತೆ ತಿರುವುಗಳ, ಗಲ್ಲಿಗಲ್ಲಿಗಳ ಗಲ್ಲ ನೇವರಿಸಿ
ಚುಂಬಿಸುತ್ತಿದೆ ಬೆಳ್ಳ... ಬೆಳದಿಂಗಳು

ತಣ್ಣಗಿನ ಕೊರೆವ ಚಳಿಯಲ್ಲಿ
ಬೆನ್ನ ಸವರುವ ಬಿಸಿಯುಸಿರೊಂದು
ಕತ್ತಲ ಸೆರಗ ಸರಿಸಿ ಒರಗುತ್ತಾ
ತನ್ನೊಳಗೆ ಕರಗಿಸಿಕೊಳ್ಳುವ
ಮಾಯಕದ ಮೋಹಜಾಲ...

ಹೊಸ್ತಿಲ ಹುಣ್ಣಿಮೆಗೆ ಮೈಪೂರಾ ಬೆಳಗುತ್ತಾ
ತನ್ನದೇ ಹೊಸ್ತಿಲಲಿ ಹೆಜ್ಜೆಗಳ ಒತ್ತಿಟ್ಟು
ಚಂದಿರನ ತೆಕ್ಕೆಗೆ ರೆಕ್ಕೆ ತೆರೆದುಕೊಂಡ ಹಕ್ಕಿ...
ಈ ಇರುಳು...
ಚಂದಿರ... ಹುಣ್ಣಿಮೆ... ಬೆಳದಿಂಗಳು...

● ಕೆ.ಎನ್. ಲಾವಣ್ಯ ಪ್ರಭಾ

